**ದಿಃ 13-03-2026 ರಂದು ಸಾಕ್ಷಿಯನ್ನು ಕರೆಸಿ ಪ್ರತಿಜ್ಞೆ ಮಾಡಿಸಲಾಯಿತು.**

ಪ್ರತಿವಾದ ಪತ್ರ ಸಲ್ಲಿಸಿದ ನಂತರ ಪಾಟೀ ಸವಾಲಿಗೆ ಅವಕಾಶ ನೀಡಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ನಂ 15 (ಎ) ದಿಂದ (ಸಿ) ಪರ ಶ್ರೀ ಎನ್ ಎಚ್ ಪಿ ವಕೀಲರಿಂದಃ**

ನನಗೆ ದಾವಾ ಆಸ್ತಿಗಳ ಸರ್ವೆ ನಂಬರ ನೆನಪಿಲ್ಲ. 15 ನೇ ಪ್ರತಿವಾದಿ ಮರಣ ಹೊಂದಿದ ನಂತರ ಆತನ ವಾರಸುದಾರರು ಸಲ್ಲಿಸಿದ ಪ್ರತಿವಾದ ಪತ್ರದ ಬಗ್ಗೆ ತಿಳಿದುಕೊಂಡಿಲ್ಲ. ಸರ್ವೆ ನಂ 43 ರ ಜಮೀನು ನಮ್ಮ ತಂದೆಗೆ ಹೇಗೆ ಬಂದಿದೆ ಎಂದು ತಿಳಿದುಕೊಂಡಿದ್ದಿರಾ ಎಂದರೆ ಸಾಕ್ಷಿ

ಸುಳ್ಳು ಎನ್ನುತ್ತಾರೆ. ನಮ್ಮ ತಂದೆ ಸಂಗಯ್ಯನಿಗೆ ಒಬ್ಬ ಅಣ್ಣ ಇದ್ದ ಆತನ ಹೆಸರು ಚನ್ನಬಸಯ್ಯ ಅಂದರೆ ನಿಜ. ಚನ್ನಬಸಯ್ಯನಿಗೆ ಮಕ್ಕಳು ಇರಲಿಲ್ಲ ಎನ್ನುವದು ನನಗೆ ಗೊತ್ತಿಲ್ಲ. ಆತನ ಹೆಂಡತಿ ಕೂಡಾ ಮರಣ ಹೊಂದಿದ್ದಾರೆ. ದಿನಾಂಕ 21.03.1945 ರಂದು ಚನ್ನಬಸಯ್ಯ ಮರಣ ಹೊಂದಿದ್ದಾರೆ ಎನ್ನುವದು ನನಗೆ ಗೊತ್ತಿಲ್ಲ. ಚನ್ನಬಸಯ್ಯನಿಗೆ ವಾರಸುದಾರರು ಇಲ್ಲದ ಕಾರಣ ಆತನ ಮರಣಾ ನಂತರ ಸರ್ವೆ ನಂ 43 ರ ಜಮೀನು ನಮ್ಮ ತಂದೆಗೆ ಬಂದಿರುತ್ತದೆ ಅಂದರೆ ನಿಜ. ಈ ಬಗ್ಗೆ ಡ ಮಂಜೂರಾಗಿರುತ್ತದೆ ಎನ್ನುವದು ನನಗೆ ಗೊತ್ತಿಲ್ಲ. ಸರ್ವೆ ನಂ 43 ರ ಜಮೀನುಗಳು ನಮ್ಮ ತಂದೆಯ ಪಿತ್ರಾರ್ಜಿತ ಆಸ್ತಿಗಳು ಅಲ್ಲ ಅಂದರೆ ಸರಿಯಲ್ಲ. ಸದರಿ ಜಮೀನು ಆತನ ಸ್ವಯಾರ್ಜಿತ ಆಸ್ತಿ ಅಂದರೆ ಸರಿಯಲ್ಲ.

ನಮ್ಮ ತಂದೆ ಸಂಗಯ್ಯ ತನ್ನ ಜೀವಿತ ಕಾಲದಲ್ಲಿ ಸರ್ವೆ ನಂ 43 ರ ಜಮೀನನ್ನು 1 ರಿಂದ 4 ನೇ ಪ್ರತಿವಾದಿಯರಿಗೆ ಬಿಟ್ಟುಕೊಟ್ಟಿದ್ದರು ಎನ್ನುವದು ಸುಳ್ಳು. ಆ ಪ್ರಕಾರ 1 ರಿಂದ 4 ನೇ ಪ್ರತಿವಾದಿಯರ ಹೆಸರು ಮಾತ್ರ ದಾಖಲಾಗಿರುತ್ತದೆ ಅಂದರೆ ಸಾಕ್ಷಿ ಹೆಣ್ಣು ಮಕ್ಕಳ ಸಹಿ ಇರುವುದಿಲ್ಲ ಅನ್ನುತ್ತಾರೆ. 1 ರಿಂದ 4 ನೇ ಪ್ರತಿವಾದಿಯರು ಸರ್ವೆ ನಂ 43 ರಲ್ಲಿ ತಮ್ಮ ತಮ್ಮಲ್ಲಿ ವಾಟ್ನಿ ಮಾಡಿಕೊಂಡಿದ್ದಾರೆ ಅಂದರೆ ಸರಿಯಲ್ಲ. ವಾಟ್ನಿ ಪ್ರಕಾರ ಸರ್ವೆ ನಂ 43/3 ರಲ್ಲಿಯ 2 ಎಕರೆ 29 ಗುಂಟೆ ಜಮೀನು 1 ನೇ ಪ್ರತಿವಾದಿ ಹೆಸರಿಗೆ, ಸರ್ವೆ ನಂ 43/2 ರಲ್ಲಿ 2 ಎಕರೆ 15 ಗುಂಟೆ ಜಮೀನು 2 ನೇ ಪ್ರತಿವಾದಿಗೆ, ಸರ್ವೆ ನಂ 43/1 ರಲ್ಲಿಯ 2 ಎಕರೆ 15 ಗುಂಟೆ ಜಮೀನು 3 ನೇ ಪ್ರತಿವಾದಿ ಹೆಸರಿಗೆ ದಾಖಲಾಗಿರುತ್ತವೆ ಅಂದರೆ ಸರಿಯಲ್ಲ. ದಾವಾ ಅನುಸೂಚಿ-ಅ ರಲ್ಲಿ 9 ರಿಂದ 11 ರ ಆಸ್ತಿಗಳಲ್ಲಿ ನಮಗೆ ಯಾವುದೆ ಹಕ್ಕು ಹಿತಾಸಕ್ತಿ ಇಲ್ಲ ಅಂದರೆ ಸರಿಯಲ್ಲ.

ಮೃತ 15 ನೇ ಪ್ರತಿವಾದಿಯು ದಿನಾಂಕ 28.04.1983 ರ ನೊಂದಾಯಿತ ಕ್ರಯ ಪತ್ರದ ಮೂಲಕ ಸರ್ವೆ ನಂ 43/3 ರಲ್ಲಿ 2 ಎಕರೆ 29 ಗುಂಟೆ ಜಮೀನನ್ನು 2 ನೇ ಪ್ರತಿವಾದಿಯಿಂದ ಕ್ರಯಕ್ಕೆ ಪಡೆದಿದ್ದಾರೆ ಅಂದರೆ ಸರಿಯಲ್ಲ. ಅದೇ ದಿನ ಸದರಿಯವರು 3 ನೇ ಪ್ರತಿವಾದಿಯಿಂದ ಸರ್ವೆ ನಂ 43/2 ರಲ್ಲಿ 2 ಎಕರೆ 15 ಗುಂಟೆ ಜಮೀನನ್ನು ಖರೀದಿಸಿದ್ದಾರೆ ಅಂದರೆ ಸರಿಯಲ್ಲ. ಅದೇ ರೀತಿ ದಿನಾಂಕ 28.05.1990 ರಂದು 1 ನೇ ಪ್ರತಿವಾದಿಯಿಂದ ಸರ್ವೆ ನಂ 43/1 ರಲ್ಲಿ 2 ಎಕರೆ 15 ಗುಂಟೆ ಜಮೀನನ್ನು ಖರೀದಿಸಿದ್ದಾರೆ ಅಂದರೆ ಸರಿಯಲ್ಲ. ಕ್ರಯ ಪತ್ರದ ಪ್ರಕಾರ ಖರೀದಿದಾರನಿಗೆ ಜಮೀನುಗಳು ಕಬ್ಜಾ ಕೊಟ್ಟಿದ್ದಾರೆ ಅಂದರೆ ಸರಿಯಲ್ಲ. ನಮಗೆ ಮೋಸ ಆಗಿದೆ ಆದರೆ ಹೇಗೆ ಆಗಿದೆ ಹೇಳಲು ಬರುವುದಿಲ್ಲ.

ಸರ್ವೆ ನಂ 43 ರ ದಾಖಲೆಗಳನ್ನು ನಾನು ಪರಿಶೀಲಿಸಿಲ್ಲ. ನಮ್ಮ ಮನೆತನದ ಹಾಗೂ ಬ್ಯಾಂಕಿಕಿನ ಸಾಲ ತುಂಬುವ ಸಲುವಾಗಿ 1 ರಿಂದ 3 ನೇ ಪ್ರತಿವಾದಿಯರು ಸರ್ವೆ ನಂ 43 ರಲ್ಲಿಯ ಜಮೀನನ್ನು 15 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಅಂದರೆ ಸರಿಯಲ್ಲ. ಕ್ರಯ ಪತ್ರಕ್ಕೆ ನಮ್ಮ ಸಹಿ ಪಡೆಯದೆ ಮಾರಾಟಗಿ ಮಾಡಿದ್ದಾರೆಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಸದರಿ ಜಮೀನು ನಮ್ಮ ತಂದೆಯ ಸ್ವಯಾರ್ಜಿತ ಜಮೀನು ಆಗಿದ್ದರಿಂದ ಅದರಲ್ಲಿ ನಮಗೆ ಯಾವುದೆ ಪಾಲು ಇಲ್ಲ ಅಂದರೆ ಸರಿಯಲ್ಲ. ನನ್ನ ಜನ್ಮ ದಿನಾಂಕ ಹೇಳಲು

ಬರುವುದಿಲ್ಲ. ನಮ್ಮ ತಂದೆ ಜಮೀನನ್ನು ನಮ್ಮ ಸಹೋದರರ ಹೆಸರಿಗೆ ಏಕೆ ಬಿಟ್ಟುಕೊಟ್ಟಿದ್ದರು ಎನ್ನುವದರ ಬಗ್ಗೆ ವಿಚಾರಣೆ ಮಾಡಿಲ್ಲ. 1 ರಿಂದ 3 ನೇ ಪ್ರತಿವಾದಿಯರು ಜಮೀನು ಮಾರಾಟ ಮಾಡಿರುವ ವಿಷಯ ನಮಗೆ 1990 ರಲ್ಲಿಯೇ ಗೊತ್ತಾಗಿದ್ದರೂ ಕೂಡಾ ಇಲ್ಲಿಯವರಿಗೆ ಸುಮ್ಮನೆ ಇದ್ದೆವು ಅಂದರೆ ಸರಿಯಲ್ಲ. ನಾವು ದಾವಾ ಅನುಸೂಚಿ-ಅ ರಲ್ಲಿ 9 ರಿಂದ 11 ನೇ ಆಸ್ತಿಗಳಲ್ಲಿ ಜಂಟಿ ಸ್ವಾಧೀನ ಹೊಂದಿದ್ದೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಜಮೀನುಗಳನುನ ಮಾರಾಟ ಮಾಡಲು ಯಾವುದೆ ಅಡಚಣೆ ಇರಲಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಪ್ರತಿವಾದಿಯರು ಒತ್ತಾಯಪೂರ್ವಕವಾಗಿ ನಮ್ಮ ಸ್ವಾಧೀನವನ್ನು ಬಿಡಿಸಬಹುದು ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಜಮೀನು ಖರೀದಿಸಿದಾಗಿನಿಂದ 15 ನೇ ಪ್ರತಿವಾದಿ ಸ್ವಾಧೀನ ಹೊಂದಿದ್ದು ಆತ ಮರಣಾ ನಂತರ ಆತನ ವಾರಸುದಾರರು ಸ್ವಾಧೀನದಲ್ಲಿ ಇದ್ದಾರೆ ಅಂದರೆ ಸರಿಯಲ್ಲ. ನಾವು ಜಮೀನು ಸ್ವಾಧೀನ ಹೊಂದಿದ್ದೇವೆ ಎನ್ನುವ ಬಗ್ಗೆ ದಾಖಲೆ ಹಾಜರ ಪಡಿಸಿಲ್ಲ. ಪ್ರತಿವಾದಿಯರಿಗೆ ತೊಂದರೆ ನೀಡಲು ಸುಳ್ಳು ದಾವೆ ಸಲ್ಲಿಸಿದ್ದೇವೆ ಅಂದರೆ ಸರಿಯಲ್ಲ.

**ಪಾಟೀ ಸವಾಲುಃ ಪ್ರತಿವಾದಿ ನಂ 15 (ಡಿ) ಪರಃ**

(ಪ್ರತಿವಾದಿ ನಂ 15 (ಎ) ದಿಂದ (ಸಿ) ರವರು ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಳ್ಳಲು ಕೇಳಿಕೊಂಡಿದ್ದರಿಂದ ಅಳವಡಿಸಿಕೊಳ್ಳಲಾಯಿತು)

**ಮರು ವಿಚಾರಣೆಃ** ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)**

**ಓ ಹೇ ಕೆ ಸರಿ ಇದೆ.**

**ಹಿರಿಯ ದಿವಾಣಿ ನ್ಯಾಯಾಧೀಶರು,**
**ಕಲಘಟಗಿ.**